( ದಿನಾಂಕಃ **06-01-2026.** ಸಾಕ್ಷಿದಾರರನ್ನು ಪ್ರಮಾಣೀಕರಿಸಲಾಯಿತು.)

ಮುಖ್ಯ ವಿಚಾರಣೆಃ ವಾದಿಯ ಪರ ಶ್ರೀ ಎಂ ಎ ಪಿ ವಕೀಲರಿಂದಃ

ನಾನು ಸಾಕ್ಷಿ ಇದ್ದು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಹಾಜರುಪಡಿಸುತ್ತಿದ್ದೇನೆ. ಅದರಲ್ಲಿ ಬರೆದ ಸಂಗತಿಗಳು ನಿಜ ಇರುತ್ತವೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಆದ್ದರಿಂದ ಪ್ರಮಾಣಪತ್ರದಲ್ಲಿನ ವಿಷಯಗಳನ್ನು ನನ್ನ ಮುಖ್ಯ ವಿಚಾರಣೆ ಅಂತಾ ಪರಿಗಣಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಜಿಲ್ಲಾಧಿಕಾರಿಯವರ ಆದೇಶದ ದೃಢೀಕೃತ ಪ್ರತಿ ನಿಪಿ-1 ಎಂದು, ಭೂಕಂದಾಯ ಕಾಯ್ದೆ ಅಡಿ ಸಲ್ಲಿಸಿದ ಅರ್ಜಿಯ ದೃಢೀಕೃತ ಪ್ರತಿ ನಿಪಿ-2 ಎಂದು, ತಕರಾರಿನ ದೃಢೀಕೃತ ಪ್ರತಿ ನಿಪಿ-3 ಎಂದು, ಪಹಣಿ ಪತ್ರಿಕೆಗಳ ದೃಢೀಕೃತ ಪ್ರತಿ ನಿಪಿ-4 ರಿಂದ 23 ಎಂದು, ಮ್ಯುಟೇಶನನ ದೃಢೀಕೃತ ಪ್ರತಿ ನಿಪಿ-24 ರಿಂದ 27 ಎಂದು, ಗ್ರಾಮ ಲೆಕ್ಕಾಧಿಕಾರಿಗಳಿಗೆ ನೀಡಿರುವ ಅರ್ಜಿಯ ದೃಢೀಕೃತ ಪ್ರತಿ ನಿಪಿ-28 ಎಂದು, ನೋಟೀಸನ ದೃಢೀಕೃತ ಪ್ರತಿ ನಿಪಿ-29 ಎಂದು, ಉಪವಿಭಾಗಾಧಿಕಾರಿಗಳ ಆದೇಶದ ದೃಢೀಕೃತ ಪ್ರತಿ ನಿಪಿ-30 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೆ. ಸರಿ ಇದೆ.**

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಯಲಬುರ್ಗಾ.**